# ಮುಧೋಳ ಪರಿಸರದ ಪುರಾತತ್ವ ನೆಲೆಗಳ ಸಂರಕ್ಷಣೆ

ಸುನೀಲ ಕುಸ್ತಿ

ಸಹಾಯಕ ಪ್ರಾಧ್ಯಾಪಕ, ಇತಿಹಾಸ ವಿಭಾಗ, ಶ್ರೀ ಎಸ್. ಆರ್. ಕಂಠಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.17296480

## ABSTRACT:

ಮುಧೋಳ ಎಂಬುದು ಬಾಗಲಕೋಟೆ ಜಿಲ್ಲೆಯ ತಾಲೂಕು ಕೇಂದ್ರವಾಗಿದ್ದು, ಜಿಲ್ಲಾ ಕೇಂದ್ರದಿಂದ ವಾಯವ್ಯ ದಿಕ್ಕಿಗೆ 60 ಕಿ.ಮೀ. ದೂರದಲ್ಲಿದೆ. ಈ ಪ್ರದೇಶವನ್ನು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಳುಕ್ಯರು, ಕಲಚೂರಿಗಳು, ಬಿಜಾಪುರ ಆದಿಲ್‌ಶಾಹಿಗಳು, ಮರಾಠಾ ಸಂಸ್ಥಾನಿಕರು ಮತ್ತು ಬ್ರಿಟಿಷರು ಆಳ್ವಿಕೆ ಮಾಡಿದ್ದಾರೆ. ಈ ಪರಿಸರದ ಅನೇಕ ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಮೂರ್ತಿಶಿಲ್ಪಗಳು ಮತ್ತು ಇತರೆ ಪುರಾತತ್ವೀಯ ಅವಶೇಷಗಳು ಇದೊಂದು ಪ್ರಮುಖ ಐತಿಹಾಸಿಕ ನೆಲೆ ಎನ್ನುವುದನ್ನು ಸಾಬೀತುಪಡಿಸುತ್ತವೆ. 'ಮುಧೋಳ' ಎಂಬ ಸ್ಥಳನಾಮದ ಕುರಿತು ಇಲ್ಲಿನ ಸ್ಥಳೀಯ ಶಾಸನಗಳೇ ಉಲ್ಲೇಖಗಳನ್ನು ನೀಡುತ್ತವೆ. ಮುಧೋಳದಲ್ಲಿರುವ ಕಲ್ಮೇಶ್ವರ ದೇವಾಲಯದಲ್ಲಿನ ಶಾಸನವು 'ಮುದವಳನಾಡು'ಎಂಬ ಸ್ಥಳನಾಮದ ಉಲ್ಲೇಖವನ್ನು ನೀಡುತ್ತದೆ. 'ಮುದವಳನಾಡು' ಎಂಬುದೇ ಪ್ರಸ್ತುತ ಮುಧೋಳ ಎಂಬ ಹೆಸರಿನಿಂದ ಕರೆಯಲಾಗುತ್ತಿದೆ. ಇದೇ ನಗರದಲ್ಲಿರುವ ಗವಿಮಠದಲ್ಲಿನ ಶಾಸನವು ಮುಧೋಳನ್ನು 'ಮುದುವೊಳಲ'ಎಂಬ ಹೆಸರಿನಿಂದ ಗುರುತಿಸುತ್ತದೆ. ಅಲ್ಲದೆ ಇಂದಿನ ಮುಧೋಳ ನಗರಕ್ಕೆ ಹಿಂದೆ 'ಮುದುವೊಳಲು'ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತೆಂಬುದು ರನ್ನನ ಆಗಮಿಕ ಗ್ರಂಥವಾದ 'ಅಜಿತತೀರ್ಥಂಕರ ಪುರಾಣ ತಿಲಕ'ದಿಂದಲೂ ತಿಳಿದುಬರುತ್ತದೆ.

## KEYWORDS:

ಅಂತರಾಳ, ಪುಷ್ಕರಣಿ, ಗರ್ಭಗೃಹ, ಲಲಾಟ ಬಿಂಬ, ನವರಂಗ

**ಪೀಠಿಕೆ:**

ಆಕರಗಳು ಕೇವಲ ಇತಿಹಾಸ ರಚನೆಗೆ ಮಾತ್ರ ಸೀಮಿತವಾಗಿರದೆ, ಅವು ನಮ್ಮ ಪ್ರಾಚೀನ ಸಂಸ್ಕೃತಿಯ ಪ್ರತಿಕೃತಿಗಳಾಗಿವೆ. ಇಂತಹ ಆಕರಗಳಲ್ಲಿ ಪ್ರಾಗಿತಿಹಾಸ ಕಾಲಘಟ್ಟದ ಅವಶೇಷಗಳು, ಶಾಸನಗಳು, ಶಿಲ್ಪಾವಶೇಷಗಳು ಮತ್ತು ಸ್ಮಾರಕಗಳು ಈ ಪರಿಸರದ ಪ್ರಮುಖ ಪುರಾತತ್ವೀಯ ಆಕರಗಳಾಗಿವೆ. ಪ್ರಸ್ತುತ ಲೇಖನವು ಮುಧೋಳ ತಾಲೂಕಿನ ವ್ಯಾಪ್ತಿಗೆ ಸೀಮಿತವಾಗಿದ್ದು, ಈ ಪರಿಸರದಲ್ಲಿ ಕಂಡುಬರುವ ಪುರಾತತ್ವ ಅವಶೇಷಗಳ ಪ್ರಸ್ತುತ ಸ್ಥಿತಿಗಳು ಮತ್ತು ಅವುಗಳ ಸಂರಕ್ಷಣೆ ಅವಶ್ಯಕತೆಯ ಮೇಲೆ ಬೆಳಕು ಚೆಲ್ಲುತ್ತದೆ. ಮುಧೋಳ ತಾಲೂಕು ಪರಿಸರದಲ್ಲಿ ಪ್ರಾಗಿತಿಹಾಸ ಕಾಲಘಟ್ಟದ ಅನೇಕ ನೆಲೆಗಳಿವೆ. ಪುರಾತತ್ವ ಸಂಶೋಧಕರಾದ ಪ್ರೊ. ಅ. ಸುಂದರ ಮತ್ತು ಕೆ. ಪದ್ದಯ್ಯರವರು ಇವುಗಳನ್ನು ಗುರುತಿಸಿದ್ದಾರೆ. ಕೆ.ಡಿ. ಬುದ್ನಿ, ಚಿಚಖಂಡಿ, ಭಂಟನೂರು, ಮುಧೋಳ ಮತ್ತು ಮೆಟಗುಡ್ಡ ಆದಿ ಹಳೆ ಶಿಲಾಯುಗದ ನೆಲೆಗಳಾಗಿವೆ. ಇಂಗಳಗಿ, ಕೆ.ಡಿ. ಬುದ್ನಿ, ಚಿಚಖಂಡಿ, ಭಂಟನೂರು, ಮಾಚಕನೂರು, ಲಕ್ಷಾನಟ್ಟಿ, ವರ್ಚಗಲ್, ವಜ್ಜರಮಟ್ಟಿ ಮತ್ತು ಹಲಕಿ ಗ್ರಾಮಗಳು ಮಧ್ಯ ಹಳೆ ಶಿಲಾಯುಗದ ನೆಲೆಗಳಾಗಿವೆ. ಭಂಟನೂರು ಎಂಬ ಗ್ರಾಮವು ನೂತನ ಶಿಲಾಯುಗ ಮತ್ತು ಶಿಲಾ–ತಾಮ್ರಯುಗಕ್ಕೆ ಸಂಬಂಧಿಸಿದ ನೆಲೆಯಾಗಿದೆ. ಆದರೆ ಪ್ರಸ್ತುತ ದಿನಮಾನಗಳಲ್ಲಿ ಈ ಎಲ್ಲ ನೆಲೆಗಳು ಸಂಪೂರ್ಣವಾಗಿ ನಾಶವಾಗಿದ್ದು, ಕೃಷಿ ಭೂಮಿಗಳಾಗಿ ಮಾರ್ಪಟ್ಟಿವೆ.

ಇವುಗಳಲ್ಲದೆ ತಾಲೂಕಿನ ಉತ್ತೂರು, ಕುಳಲಿ, ಬರಗಿ, ಬೆಳಗಲಿ, ಭಂಟನೂರು, ಮಳಲಿ, ಮಾಚಕನೂರು, ಮುಧೋಳ, ಮಂಟೂರು, ರೂಗಿ, ಲೋಕಾಪುರ ಮತ್ತು ಶಿರೋಳ ಗ್ರಾಮಗಳು ಪ್ರಮುಖ ಪುರಾತತ್ವೀಯ ನೆಲೆಗಳಾಗಿವೆ.

**ಪ್ರಮುಖ ಪುರಾತತ್ವ ನೆಲೆಗಳು**

**ಉತ್ತೂರು**

ಉತ್ತೂರು ಗ್ರಾಮವು ಮುಧೋಳ ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ ಸುಮಾರು 14 ಕಿ.ಮೀ. ದೂರದಲ್ಲಿ ನೆಲೆಗೊಂಡ ಗ್ರಾಮವಾಗಿದೆ. ಇಲ್ಲಿನ ಕಲ್ಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹ ಮಾತ್ರ ಪ್ರಾಚೀನ ಕಾಲದ್ದಾಗಿದ್ದು, ಇದರ ಪ್ರವೇಶ ದ್ವಾರವು ಪ್ರಾಚೀನತೆಯನ್ನು ದೃಢಪಡಿಸುತ್ತದೆ. ಉಳಿದಂತೆ ದೇವಾಲಯದ ಅಂತರಾಳ ಮತ್ತು ನವರಂಗ ಭಾಗಗಳನ್ನು ಸಂಪೂರ್ಣವಾಗಿ ಇತ್ತೀಚೆಗೆ ನಿರ್ಮಿಸಲಾಗಿದೆ. ದೇವಾಲಯದ ಪ್ರಾಚೀನ ಸ್ತಂಭಗಳು ದೇವಾಲಯದ ಎದುರಿಗಿರುವ ಒಂದು ಕಟ್ಟೆಯ ಮೇಲೆ ಮತ್ತು ಗ್ರಾಮದಲ್ಲಿರುವ ಲಕ್ಷ್ಮೀವೆಂಕಟೇಶ್ವರ ದೇವಾಲಯದ ಆವರಣದಲ್ಲಿ ಕಂಡುಬರುತ್ತವೆ.

**ಬೆಳಗಲಿ**

ಬೆಳಗಲಿ ಗ್ರಾಮವು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ 15 ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿದ್ದ ಶಾಸನವನ್ನು ಪ್ರಸ್ತುತವಾಗಿ ಜಮಖಂಡಿಯ ಡಬ್ಲ್ಯು. ಟಿ. ಆಪ್ಟೆಯವರ ಮನೆಯಲ್ಲಿ ಸಂಗ್ರಹಿಸಿಡಲಾಗಿದೆ. ಇದು ಕ್ರಿ.ಶ. 1076ರ ತ್ರುಟಿತ ಶಾಸನವಾಗಿದ್ದು, ಇದರಲ್ಲಿ ತ್ರಿಭುವನಮಲ್ಲದೇವ (ಆರನೆಯ ವಿಕ್ರಮಾದಿತ್ಯ) ನ ಉಲ್ಲೇಖ ಕಂಡುಬರುತ್ತದೆ.ಜೊತೆಗೆ ಇಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಅನೇಕ ದೇವಾಲಯಗಳು ನಿರ್ಮಾಣವಾಗಿರುವುದರಿಂದ ಈ ಪ್ರದೇಶದಲ್ಲಿ ಅವರ ಆಡಳಿತವಿತ್ತೆಂಬುದು ಸ್ಪಷ್ಟವಾಗುತ್ತದೆ. ಬೆಳಗಲಿ ಗ್ರಾಮದ ಸುತ್ತಲೂ ಕೋಟೆ ಹಾಗೂ ಕಂದಕದ ಕುರುಹುಗಳು ಕಂಡುಬರುತ್ತವೆ. ಭೂಮಿಯನ್ನು ಅಗೆಯುವ ಸಂದರ್ಭದಲ್ಲಿ ಸಿಕ್ಕ ಅನೇಕ ತೃಟಿತ ಶಿಲ್ಪಗಳನ್ನು ಊರಿನ ಮಧ್ಯಭಾಗದಲ್ಲಿರುವ ಒಂದು ಬನ್ನಿಕಟ್ಟೆಯ ಮೇಲೆ ಇರಿಸಲಾಗಿದೆ.

ಬೆಳಗಲಿಯ ಸಂರಕ್ಷಿತ ಪುರಾತತ್ವ ಅವಶೇಷವೆಂದರೆ ಅದು ಅಮೃತೇಶ್ವರ ದೇವಾಲಯವಾಗಿದೆ. ಇದನ್ನು ಈಶ್ವರಲಿಂಗ ದೇವಾಲಯವೆಂತಲೂ ಕರೆಯುತ್ತಾರೆ. ಇದು ಗರ್ಭಗೃಹ, ಅಂತರಾಳ ಮತ್ತು ತೆರೆದ ಮುಖಮಂಟಪದ ರಚನೆಯನ್ನು ಹೊಂದಿದೆ. ಗರ್ಭಗೃಹದ ಮಧ್ಯಭಾಗದಲ್ಲಿ 'ಅಮೃತೇಶ್ವರ' ಎಂದು ಕರೆಯಲ್ಪಡುವ ಪ್ರಾಚೀನ ಶಿವಲಿಂಗವಿದೆ. ಇದನ್ನು ಕಲ್ಯಾಣ ಚಾಳುಕ್ಯರ ಕಾಲಘಟ್ಟದ ಶಿವಲಿಂಗವೆಂದು ಗುರುತಿಸಲಾಗುತ್ತದೆ. ಮುಖಮಂಟಪದಲ್ಲಿನ ಸ್ಥಂಭಗಳು ಪೀಠ, ಪಾದ, ದಂಡ, ತಡಿ, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ಮುಖಮಂಟಪದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶಕ್ಕಾಗಿ ಸೋಪಾನಗಳಿದ್ದು, ಇವುಗಳ ಇಕ್ಕೆಲಗಳಲ್ಲಿ ಹಸ್ತಹಸ್ತಿಯ ರಚನೆಗಳನ್ನು ಕಾಣಬಹುದು.

ಮಹಾಲಿಂಗೇಶ್ವರ ದೇವಾಲಯವು ಬೆಳಗಲಿ ಗ್ರಾಮದ ಮತ್ತೊಂದು ಪ್ರಾಚೀನ ದೇವಾಲಯವಾಗಿದೆ. ಪ್ರಸ್ತುತವಾಗಿ ದೇವಾಲಯವು ಹೊಸ ಮಾದರಿಯ ಒಂದು ದ್ವಿಕೂಟ ಮಾದರಿಯ ದೇವಾಲಯದಂತೆ ನಿರ್ಮಾಣಗೊಂಡಿದೆ. ಎರಡೂ ಗರ್ಭಗೃಹಗಳು ಇತ್ತೀಚೆಗೆ ನಿರ್ಮಾಣವಾದವುಗಳಾಗಿದ್ದರೂ ಪೂರ್ವಾಭಿಮುಖವಾಗಿ ನಿರ್ಮಾಣವಾದ ಗರ್ಭಗೃಹ

ದ್ವಾರದ ಅವಶೇಷಗಳು ಪ್ರಾಚೀನ ಕಾಲದ್ದವುಗಳಾಗಿವೆ. ಗರ್ಭಗೃಹದ ಮಧ್ಯದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಪ್ರಾಚೀನ ಶಿವಲಿಂಗವಿದೆ. ದೇವಾಲಯದ ಆವರಣದಲ್ಲಿ ಪ್ರಾಚೀನ ಸ್ಥಂಭದ ಅವಶೇಷಗಳು, ಭಿತ್ತಿಯ ಅವಶೇಷಗಳು ಹಾಗೂ ಹಸ್ತಹಸ್ತಿಯ ಶಿಲ್ಪಗಳು ಕಂಡುಬರುತ್ತವೆ. ಬೆಳಗಲಿಯ ಮತ್ತೊಂದು ಪ್ರಾಚೀನ ದೇವಾಲಯ ರಾಮಲಿಂಗೇಶ್ವರ ದೇವಾಲಯವಾಗಿದೆ. ಬೆಳಗಲಿ ಗ್ರಾಮದ ಪಶ್ಚಿಮ ಭಾಗದಲ್ಲಿರುವ ಹಳ್ಳದ ದಂಡೆಯ ಮೇಲೆ ಈ ದೇವಾಲಯವು ನಿರ್ಮಾಣವಾಗಿದೆ. ಇದು ಗರ್ಭಗೃಹ ಹಾಗೂ ತೆರೆದ ಸಭಾಮಂಟಪಗಳ ರಚನೆಯಿಂದ ಕೂಡಿದ್ದು, ಸಂರಕ್ಷಣೆ ಇಲ್ಲದ ಕಾರಣ ಈ ಪುಷ್ಕರಣಿಯೂ ಕೂಡ ಇಂದು ವಿನಾಶದ ಅಂಚಿನಲ್ಲಿದೆ. ಈ ಪುಷ್ಕರಣಿಯ ಪಕ್ಕದಲ್ಲಿರುವ ಒಂದು ಮಣ್ಣಿನ ದಿಬ್ಬದ ಮೇಲೆ ಇದೇ ದೇವಾಲಯದ ಅನೇಕ ಪ್ರಾಚೀನಾವಶೇಷಗಳು ಬಿಡಿಬಿಡಿಯಾಗಿ ಬಿದ್ದಿರುವುದು ಕಂಡುಬರುತ್ತವೆ.

ಬೆಳಗಲಿಯ ರೂಪಣ್ಣ ದೇವಾಲಯವು ಗ್ರಾಮದ ಮತ್ತೊಂದು ಪುರಾತತ್ವ ಅವಶೇಷವಾಗಿದ್ದು, ಇಂದು ಸಂಪೂರ್ಣವಾಗಿ ನಾಶವಾಗಿದೆ. ದೇವಾಲಯದ ಅಧಿಷ್ಠಾನ ಭಾಗಗಳು ಮಾತ್ರ ಉಳಿದುಕೊಂಡು ಬಂದಿದ್ದು, ಅವುಗಳೂ ಕೂಡ ಭೂಮಿಯಲ್ಲಿ ಹೂತುಹೋಗಿವೆ. ಇನ್ನುಳಿದಂತೆ ದೇವಾಲಯದ ಅವಶೇಷಗಳಾದ ಸ್ತಂಭಗಳು, ವಿತಾನ ಭಾಗದ ತೊಲೆಗಳು, ಭಿತ್ತಿಯ ಅವಶೇಷಗಳು ಇನ್ನೂ ಅನೇಕ ಅವಶೇಷಗಳು ಕಂಡುಬರುತ್ತವೆ. ಇವೆಲ್ಲವುಗಳನ್ನು ನೋಡಿದರೆ ಸಾಮಾನ್ಯವಾಗಿ ದೇವಾಲಯವು ಗರ್ಭಗೃಹ, ಅಂತರಾಳ ಹಾಗೂ ನವರಂಗ ಭಾಗಗಳನ್ನು ಹೊಂದಿತ್ತೆಂಬುದು ಗೊತ್ತಾಗುತ್ತದೆ. ಶಿವನಿಗೆ ಸಂಬಂಧಿಸಿದ ಮೂರ್ತಿಶಿಲ್ಪಗಳು ದೇವಾಲಯದ ಆವರಣದಲ್ಲಿ ಬಿಡಿಬಿಡಿಯಾಗಿ ಬಿದ್ದಿವೆ. ದೇವಾಲಯದ ವಾಸ್ತು ಲಕ್ಷಣಗಳನ್ನು ಗಮನಿಸಿದರೆ ಇದೊಂದು ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯವಾಗಿತ್ತೆಂಬುದು ತಿಳಿದುಬರುತ್ತದೆ. ದೇವಾಲಯದ ಮುಂದೆ ಬೃಹತ್ ಆಕಾರದ ಪ್ರಾಚೀನ ಪುಷ್ಕರಣಿ ಇದೆ. ಇದನ್ನು ಸ್ಥಳೀಯರು 'ಗರಗದ ಬಾವಿ' ಹಾಗೂ 'ಗರಿಗ್ಯಾನ ಬಾವಿ' ಎಂದು ಕರೆಯುತ್ತಾರೆ.

**ಮಳಲಿ**

ಮಳಲಿ ಗ್ರಾಮದಲ್ಲಿರುವ ಕಲ್ಮೇಶ್ವರ ದೇವಾಲಯವು ಗ್ರಾಮದ ಪ್ರಮುಖ ಪುರಾತತ್ವ ಅವಶೇಷವಾಗಿ ಕಂಡುಬರುತ್ತದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗ ಭಾಗಗಳು ಮಾತ್ರ ಪ್ರಾಚೀನ ಕಾಲದ ರಚನೆಗಳಾಗಿವೆ. ನವರಂಗದಲ್ಲಿನ ಸ್ತಂಭಗಳು ಪೀಠ, ಪಾದ, ದಂಡ, ತಡಿ, ಫಲಕ ಮತ್ತು ಬೋಧಿಗೆಗಳನ್ನು ಹೊಂದಿದೆ. ನವರಂಗಕ್ಕೆ ಹೊಂದಿಕೊಂಡಂತೆ ರಚನೆಯಾಗಿರುವ ಸಭಾಮಂಟಪವು ಇತ್ತೀಚೆಗೆ ರಚನೆಯಾಗಿದೆ. ವಾಸ್ತುಶಿಲ್ಪದ ದೃಷ್ಟಿಯಿಂದ ಇದು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

**ಮಾಚಕನೂರು**

ಮಾಚಕನೂರಿನ ಹೊಳೆಬಸವೇಶ್ವರ ದೇವಾಲಯವು ಅದರ ವಾಸ್ತುಶೈಲಿಯನ್ನು ಗಮನಿಸಿದಾಗ ಇದು ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯವಾಗಿದೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದ್ದು, ಘಟಪ್ರಭಾ ನದಿಯ ದಡದ ಮೇಲೆ ನಿರ್ಮಾಣಗೊಂಡಿದೆ. ಈ ದೇವಾಲಯವನ್ನು ಹೊಳೆಬಸವೇಶ್ವರ ದೇವಾಲಯ

ಎಂದು ಕರೆಯುವರು. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ಸಭಾಮಂಟಪವಿದೆ. ದೇವಾಲಯವು ಸುತ್ತಲೂ ಹಲವಾರು ರೀತಿಯ ಅಲಂಕೃತ ಸ್ತಂಭಗಳಿಂದ ನಿರ್ಮಾಣಗೊಂಡಿದೆ. ಗರ್ಭಗೃಹ ಮತ್ತು ಅರ್ಧಮಂಟಪದ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಗರ್ಭಗೃಹದ ಮೇಲೆ ಆಧುನಿಕ ಶೈಲಿಯ ಗೋಪುರವನ್ನು ಹೊಂದಿದೆ. ಈ ದೇವಾಲಯವನ್ನು 'ಗಣಾಚಾರಿ ವಂಶಸ್ಥರು' ಸುಮಾರು 600 ವರ್ಷಗಳಿಂದ ನಿರ್ವಹಣೆ ಮಾಡುತ್ತಾ ಮತ್ತು ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿಕೊಂಡು ಬಂದಿದ್ದಾರೆ.

**ಮುಧೋಳ**

ಮುಧೋಳ ನಗರದಲ್ಲಿರುವ ಕುರುಬರೊಬ್ಬರ ಬಳಿಯಲ್ಲಿದ್ದ ಕ್ರಿ.ಶ. 560ರ ಈ ತಾಮ್ರಶಾಸನವು ಬಾದಾಮಿ ಚಾಲುಕ್ಯರ ಪೂಗವರ್ಮನ ಕಾಲಕ್ಕೆ ಸೇರಿದ್ದಾಗಿದೆ. ಈತ ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಅಶ್ವಮೇಧ ಮುಂತಾದ ಯಜ್ಞಗಳ ಅವಭೃತ ಸ್ನಾನದಿಂದ ಪವಿತ್ರನಾದ ಪೃಥ್ವೀವಲ್ಲಭ (ಒಂದನೆಯ ಪುಲಕೇಶಿ)ನ ಮಗನೆಂದು ಈತನನ್ನು ಶಾಸನವು ವರ್ಣಿಸುತ್ತದೆ. ಅಲ್ಲದೆ ಈತ ವರಾಹಿ ದೇವರಿಗೆ ಮಳಕೇತಕ ಗ್ರಾಮದಲ್ಲಿನ ಭೂಮಿಯನ್ನು ದಾನ ಮಾಡಿದ್ದನ್ನು ಉಲ್ಲೇಖಿಸಿ, ದಾನ ಮಾಡಿದ ಈ ಭೂಮಿಯನ್ನು ಉಪಭೋಗಸ್ಥರಿಗೆ 33 ಪಾಲುಗಳನ್ನು ಮಾಡಿಕೊಡಲಾಯಿತೆಂಬುದನ್ನು ಶಾಸನವು ತಿಳಿಸುತ್ತದೆ.

ಮುಧೋಳ ನಗರದ ಹೊರಭಾಗದಲ್ಲಿರುವ ಗವಿಮಠದಲ್ಲಿ ಕ್ರಿ.ಶ. 1233ರ ಶಾಸನವಿದೆ. ಈ ಶಾಸನದ ಬಹುತೇಕ ಭಾಗವು ತೃಟಿತವಾಗಿದ್ದು, ದೇವರಿಗೆ ಭೂದಾನ ಮಾಡಿದ್ದನ್ನು ಮತ್ತು 'ಲಕ್ಷ್ಮೀದೇವರಸ' ಎಂಬ ಮುಧೋಳ ಗ್ರಾಮದ ಗೌಡರ ಹೆಸರಿನ ಉಲ್ಲೇಖವನ್ನು ನೀಡುತ್ತದೆ.ಈ ಶಾಸನದ ಇನ್ನೊಂದು ವಿಶೇಷತೆ ಎಂದರೆ ಇದು 'ಮುದುವೊಳಲ' ಎಂಬ ಮುಧೋಳದ ಸ್ಥಳನಾಮವನ್ನು ತಿಳಿಸುವುದಾಗಿದೆ. ಹೀಗಾಗಿ ಈ ಪ್ರದೇಶದ ಇತಿಹಾಸ ರಚನೆಗೆ ಈ ಶಾಸನವು ಪ್ರಮುಖವಾದ ಪುರಾತತ್ವೀಯ ಆಕರವಾಗಿದೆ.

ಮುಧೋಳದಲ್ಲಿರುವ ನೆಲಗುಡಿ ಮಹಾದೇವ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣವಾಗಿದೆ. ಭೂಮಿಯ ತಳಮಟ್ಟದಲ್ಲಿ ಇದು ಹೂತುಹೋಗಿದ್ದರಿಂದ ಇದನ್ನು 'ನೆಲಗುಡಿ ಮಹಾದೇವ' ಎಂಬ ಹೆಸರಿನಿಂದ ಕರೆಯುತ್ತಾರೆ. ಕೆಲವರು ಇದನ್ನು ಸ್ಥಳೀಯವಾಗಿ 'ಶಿವನ ದೇವಾಲಯ'ವೆಂದೂ ಕರೆಯುತ್ತಾರೆ.ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗದ ರಚನೆಗಳನ್ನು ಹೊಂದಿದೆ. ಪ್ರಸ್ತುತ ಈ ದೇವಾಲಯದಲ್ಲಿ ಪ್ರಾಚೀನ ಗರ್ಭಗೃಹವಿದ್ದು, ಮಧ್ಯದಲ್ಲಿ ಪ್ರಾಚೀನ ಶಿವಲಿಂಗವಿದೆ. ನವರಂಗ ಭಾಗದ ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಗಜಲಕ್ಷ್ಮೀ ಲಲಾಟಬಿಂಬವನ್ನು ಹೊಂದಿರುವ ಎರಡು ದ್ವಾರಗಳು ಕಂಡುಬರುತ್ತವೆ. ಆದರೆ ಇವುಗಳನ್ನು ಸಂಪೂರ್ಣವಾಗಿ ಮುಚ್ಚಿಹಾಕಿದ್ದಾರೆ. ಇವುಗಳ ಆಧಾರದಿಂದ ಇದೊಂದು ತ್ರಿಕೂಟ ದೇವಾಲಯವಾಗಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಪ್ರಸ್ತುತವಾಗಿ ಈ ದೇವಾಲಯದ ಬಹುತೇಕ ಭಾಗಗಳು ಜೀರ್ಣೋದ್ಧಾರಕ್ಕೊಳಗಾಗಿವೆ. ಆದರೆ ಈ ದೇವಾಲಯದಲ್ಲಿನ ಪ್ರಾಚೀನ ಶಿವಲಿಂಗ ಮತ್ತು ದೇವಾಲಯದ ವಾಸ್ತುಶೈಲಿಯ ಲಕ್ಷಣಗಳ ಆಧಾರದ ಮೇಲೆ ಇದು ರಾಷ್ಟ್ರಕೂಟರ ಕಾಲದ ದೇವಾಲಯವಾಗಿದೆ ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮುಧೋಳದಲ್ಲಿರುವ ಕಲ್ಮೇಶ್ವರ ದೇವಾಲಯವು ಮುಧೋಳದ ಪುರಾತತ್ವೀಯ ಅವಶೇಷಗಳಲ್ಲೊಂದು. ಇದು ಶಾಸನೋಕ್ತ ದೇವಾಲಯವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಮತ್ತು ಇತ್ತೀಚೆಗೆ ನಿರ್ಮಾಣಗೊಂಡ ತೆರೆದ ಸಭಾಮಂಟಪವನ್ನು ಹೊಂದಿದೆ.

ದೇವಾಲಯದ ಗರ್ಭಗೃಹದ ಮಧ್ಯಭಾಗದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಲಾದ ಶಿವಲಿಂಗ ಕಂಡುಬರುತ್ತದೆ. ನವರಂಗದ ಸ್ತಂಭಗಳು ಪೀಠ, ಪಾದ, ದಂಡ, ಕಳಶ, ತಡಿ, ಫಲಕ ಮತ್ತು ಬೋದಿಗೆಗಳ ರಚನೆಯೊಂದಿಗೆ ನಿರ್ಮಾಣವಾಗಿವೆ. ನವರಂಗಕ್ಕೆ ಹೊಂದಿಕೊಂಡಂತೆ ಇತ್ತೀಚೆಗೆ (30 ವರ್ಷಗಳ ಹಿಂದೆ) ನಿರ್ಮಿಸಲಾದ ತೆರೆದ ಸಭಾಮಂಟಪವಿದೆ. ದೇವಾಲಯದ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯವೆಂದು ತಿಳಿದುಬರುತ್ತದೆ. ಪ್ರಸ್ತುತ ಈ ದೇವಾಲಯಕ್ಕೆ 'ಮಹಾದೇವ ಮಾರುತಿ ಪೂಜಾರಿ' ಎನ್ನುವವರು ದೇವಾಲಯದ ಅರ್ಚಕರಾಗಿದ್ದು, 'ಗುರವ' ಪಂಗಡಕ್ಕೆ ಸೇರಿದವರಾಗಿದ್ದಾರೆ. ಉತ್ತರಾಂಗ ಭಾಗದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಶಾಸನವಿದ್ದು, ಸುಲ್ತಾನನಾದ ಇಸ್ಮಾಯಿಲ್ ಪಾತಶೆ ಕಾಲದಲ್ಲಿ ಸ್ಥಳೀಯ ಜನರಿಂದ ಈ ದೇವಾಲಯವು ಜೀರ್ಣೋದ್ಧಾರಗೊಂಡಿರುವ ಮಾಹಿತಿಯನ್ನು ತಿಳಿಸುತ್ತದೆ.

**ಮಂಟೂರು**

ಮುಧೋಳ ತಾಲ್ಲೂಕಿನ ಮಂಟೂರು ಗ್ರಾಮದಲ್ಲಿ ರಾಮಲಿಂಗ ದೇವಾಲಯದ ಹತ್ತಿರದ ಕಲ್ಲಿನ ಮೇಲಿರುವ ಕ್ರಿ.ಶ. 1041ರ ಶಾಸನವು ಈ ಗ್ರಾಮದ ಇತಿಹಾಸವನ್ನು ಕಟ್ಟಿಕೊಡುವ ಪ್ರಾಚೀನ ಅವಶೇಷವಾಗಿದೆ. ಇದು ಈಗ ಇದೇ ಗ್ರಾಮದ ಲಕ್ಷ್ಮೀದೇವಿ ದೇವಾಲಯದ ಆವರಣದಲ್ಲಿದೆ. ಈ ಶಾಸನವು ಕಲ್ಯಾಣ ಚಾಳುಕ್ಯರ ಅರಸ ಒಂದನೆಯ ಜಗದೇಕಮಲ್ಲನ ಕಾಲದ್ದಾಗಿದ್ದು, ಸವದತ್ತಿಯ ರಟ್ಟರಿಗೂ ಸಂಬಂಧಿಸಿದ ಶಾಸನ ಇದಾಗಿದೆ. ಸವದತ್ತಿಯ ರಟ್ಟರಸ ಎರೆಯಮ್ಮನು ದಂಡದಿಂದ ಬಂದ ಆದಾಯದಿಂದ ಮಂಟೂರಿನಲ್ಲಿ ಒಂದು ಕೆರೆಯನ್ನು ತೋಡಿಸಿ, ಆ ಕೆರೆಗೆ 'ರಟ್ಟಸಮುದ್ರ ಕೆರೆ' ಎಂದು ಕರೆದಿರುವುದು ಈ ಶಾಸನದ ಪ್ರಮುಖ ವಿಷಯವಾಗಿದೆ.

ಮಂಟೂರು ಗ್ರಾಮದ ಉತ್ತರ ದಿಕ್ಕಿಗೆ 1.5 ಕಿ.ಮೀ. ದೂರದಲ್ಲಿ ನೆಲೆಗೊಂಡಿರುವ ಪ್ರಾಚೀನ ದೇವಾಲಯವಿದ್ದು, ಉತ್ತರಾಭಿಮುಖವಾಗಿ ನಿರ್ಮಾಣವಾದ ಶೈವ ದೇವಾಲಯವಾಗಿದೆ. ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಿದಾಗ ಇದು ಕಲ್ಯಾಣ ಚಾಳುಕ್ಯರ ದೇವಾಲಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ನವರಂಗ ಭಾಗಗಳನ್ನು ಹೊಂದಿದೆ. ಆದರೆ ಈ ದೇವಾಲಯವು ಸದ್ಯ ಸಂಪೂರ್ಣವಾಗಿ ಹಾಳಾಗಿದೆ. ಈ ದೇವಾಲಯವನ್ನು ಗ್ರಾಮಸ್ಥರು 'ಮಲ್ಲಯ್ಯನ ದೇವಸ್ಥಾನ', 'ಶಿವನ ದೇವಸ್ಥಾನ', 'ಸೂಳೆ ದೇವಾಲಯ' ಮತ್ತು 'ಸೂಳೆಗುಡಿ' ಎಂದು ಕರೆಯುತ್ತಾರೆ. ಮಂಟೂರು ಗ್ರಾಮದ ಪುರಾತತ್ವೀಯ ಅವಶೇಷಗಳಲ್ಲಿ ಕಲ್ಮೇಶ್ವರ ದೇವಾಲಯವೂ ಒಂದು. ಇದು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಾಗಿದ್ದು, ಗರ್ಭಗೃಹ, ಅಂತರಾಳ ಮತ್ತು ನವರಂಗ ಭಾಗಗಳನ್ನು ಹೊಂದಿದ್ದು, ಪ್ರಸ್ತುತ ಶಿಥಿಲಾವಸ್ಥೆಯಲ್ಲಿದೆ. ದೇವಾಲಯದ ಎಡಭಾಗದ ಒಳಭಿತ್ತಿ ಮಾತ್ರ ಪ್ರಾಚೀನವಾಗಿದ್ದು, ದೇವಾಲಯದ ಇನ್ನುಳಿದ ಭಿತ್ತಿಭಾಗವನ್ನು ನಂತರದ ಕಾಲಘಟ್ಟದಲ್ಲಿ ರಚನೆ ಮಾಡಲಾಗಿದೆ. ರಾಮಲಿಂಗೇಶ್ವರ ದೇವಾಲಯ ಮತ್ತು ಅದರಲ್ಲಿರುವ ಪ್ರಾಚೀನ ಶಿವಲಿಂಗ ಮಂಟೂರು ಗ್ರಾಮದ ಪುರಾತತ್ವೀಯ ಆಕರಗಳಾಗಿವೆ. ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವನ್ನು ಹೊಂದಿದೆ. ಪ್ರಸ್ತುತವಾಗಿ ಈ ದೇವಾಲಯವು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಗರ್ಭಗೃಹ ಮತ್ತು ಅಂತರಾಳ ಭಾಗಗಳು ಪ್ರಾಚೀನವಾಗಿದ್ದು, ಮುಂಭಾಗ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಗರ್ಭಗೃಹದಲ್ಲಿ ಪ್ರಾಚೀನ ಶಿವಲಿಂಗವಿದ್ದು,

ಇದು ಕಲ್ಯಾಣ ಚಾಳುಕ್ಯರ ಕಾಲಘಟ್ಟಕ್ಕೆ ಸಂಬಂಧಿಸಿದ ಶಿವಲಿಂಗವೆಂದು ಗುರುತಿಸಲಾಗುತ್ತದೆ.

**ಲೋಕಾಪುರ**

ರಾಷ್ಟ್ರಕೂಟರ ಸಾಮಂತರಾದ ಚಲ್ಲಕೇತನ ಮನೆತನದ ಅರಸ ವೀರಬಂಕೇಯನ ದ್ವಿತೀಯ ಪುತ್ರ ಲೋಕಾದಿತ್ಯ (ಲೋಕಟೆ)ನು ತನ್ನ ತಂದೆಯ ನೆನಪಿಗೋಸ್ಕರ ಬಂಕಾಪುರ ಹಾಗೂ ತನ್ನ ಹೆಸರಿನಲ್ಲಿ ಲೋಕಾಪುರವನ್ನು ಕ್ರಿ.ಶ. 898ರಲ್ಲಿ ಸ್ಥಾಪಿಸಿದನು. ಇವನು ಹರಿ, ಹರ, ಜಿನ, ಸುತ (ಬುದ್ಧ ) ದೇವಾಲಯಗಳನ್ನು ಕಟ್ಟಿಸಿ, ವೈಷ್ಣವ, ಶೈವ, ಬೌದ್ಧ ಧರ್ಮಕ್ಕೆ ಸಮಾನ ಪ್ರಾತಿನಿಧ್ಯ ನೀಡಿದನು. ಅಷ್ಟೇ ಅಲ್ಲದೆ ಲೋಕಮಾಹೇಶ್ವರಿ ದೇವಾಲಯ, ಲೋಕನಾಥ ಬಸದಿ, ಲೋಕಸಮುದ್ರ ಸರೋವರ ನಿರ್ಮಿಸಿದ ಎಂಬುದನ್ನು ಇಲ್ಲಿನ ಸ್ಥಳೀಯ ಶಾಸನ ತಿಳಿಸುತ್ತದೆ. ಅಂದಿನ ಲೋಕಮಾಹೇಶ್ವರಿ ದೇವಾಲಯ ಇಂದು ಲೋಕೇಶ್ವರ ದೇವಸ್ಥಾನವಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಶಾಸನದಲ್ಲಿ ಉಲ್ಲೇಖಗೊಂಡ ಲೋಕಬಸದಿ ಅವಸಾನವಾಗಿದೆ ಹಾಗೂ ಲೋಕಸಮುದ್ರ ಸರೋವರ ಇಂದಿನ ಕಿರಿದಾದ ಹಳ್ಳವಾಗಿರವಾಗಿದೆಯೆಂದು ಸ್ಥಳೀಯರು ತಿಳಿಸುತ್ತಾರೆ.

**ಶಿರೋಳ**

ಶಿರೋಳ ಗ್ರಾಮವು ಮುಧೋಳ ತಾಲೂಕು ಕೇಂದ್ರದಿಂದ ಉತ್ತರ ದಿಕ್ಕಿಗೆ 06 ಕಿ.ಮೀ ದೂರದಲ್ಲಿದೆ. ಇಲ್ಲಿನ ಕಾಡಸಿದ್ಧೇಶ್ವರ ದೇವಾಲಯದಲ್ಲಿ 'ಕಲಚೂರಿ ಬಿಜ್ಜಳರಸನ' ಕಾಲದ ಒಂದು ಶಾಸನವಿದೆ. ಪಿರಿಯ ಅಗ್ರಹಾರ ಜಂಬುಖಂಡಿ (ಜಮಖಂಡಿ)ಯ ನಾಲ್ಕುನೂರು ಮಹಾಜನರು ಶಿರೋಳ ಗ್ರಾಮದ ಹೊರಗಿರುವ ನಾಗೇಶ್ವರ ದೇವಾಲಯಕ್ಕೆ ಒಂದು (ಖಾಲಿ) ನಿವೇಶನವನ್ನೂ ಈ ದೇವಾಲಯದ ಅಂಗಭೋಗಕ್ಕಾಗಿ (ಈ ನಿವೇಶನದಲ್ಲಿ ವಾಸಿಸುವ ನಜರ ಮೇಲಿನ) ಇಕ್ಕೆದರೆ (?), ಹೊಗೆದೆರೆ, ದನಬಳ, ಮೇಟಿ–ಕುದುರೆದೆರೆ, ಸೂಳೆದೆರೆ, ಮದುವೆದೆರೆಗಳನ್ನೂ ದಾನವಾಗಿ ನೀಡಿದುದು ಈ ಶಾಸನದ ಪ್ರಮುಖ ವಿಷಯವಾಗಿದೆ. ಬಿಜ್ಜಳನು ತಾನು ಮಹಾಮಂಡಲೇಶ್ವರನಾಗಿದ್ದಾಗ (ಕ್ರಿ.ಶ.1134ರಲ್ಲಿ ) ತಾನೇ ಚಕ್ರವರ್ತಿ ಎಂದು ಸಾರಿಕೊಂಡದ್ದು ಈ ಶಾಸನದಲ್ಲಿ ಕಂಡುಬರುತ್ತದೆ.

**ಇತರ ಪುರಾತತ್ವ ಅವಶೇಷಗಳು**

ಮೇಲೆ ವಿವರಿಸಲಾದ ಗ್ರಾಮಗಳಲ್ಲಿನ ಅವಶೇಷಗಳಷ್ಟೇ ಅಲ್ಲದೆ ತಾಲೂಕಿನ ಬರಗಿ ಗ್ರಾಮದಲ್ಲಿ ಪಾರ್ಶ್ವನಾಥ ತೀರ್ಥಂಕರರ ಪ್ರಾಚೀನ ಶಿಲ್ಪವಿದೆ. ಭಂಟನೂರು ಗ್ರಾಮದಲ್ಲಿ ಪ್ರಾಚೀನ ಕಾಲದ ತ್ರಿಭಂಗಿಯ ಕಾಲಭೈರವ ಶಿಲ್ಪವಿದೆ. ರೂಗಿ ಎಂಬ ಗ್ರಾಮದಲ್ಲಿ ವೀರಗಲ್ಲು, ನಿಸಿಧಿಗಲ್ಲು ಮತ್ತು ಪ್ರಾಚೀನ ದೇವಾಲಯದ ಅವಶೇಷಗಳು ಪತ್ತೆಯಾಗಿವೆ. ಕುಳಲಿ ಎಂಬ ಗ್ರಾಮದಲ್ಲಿ ಒಂದು ಶಾಸನ, ದೊಡ್ಡದಾದ ಗಜಲಕ್ಷ್ಮೀ ಶಿಲ್ಪ ಮತ್ತು ಪ್ರಾಚೀನ ದೇವಾಲಯದ ಅವಶೇಷಗಳು ದೊರೆತಿವೆ. ಇಂತಹ ಅವಶೇಷಗಳನ್ನು ಸಂರಕ್ಷಿಸುವ ಮಹತ್ತರವಾದ ಕಾರ್ಯಗಳು ಸರ್ಕಾರ ಮತ್ತು ಸಾರ್ವಜನಿಕರಿಂದ ಆಗಬೇಕಿದೆ.

**ಪುರಾತತ್ವ ನೆಲೆಗಳ ಸಂರಕ್ಷಣಾ ಕ್ರಮಗಳು**

1. ಪುರಾತತ್ವ ನೆಲೆಗಳ ಕುರಿತು ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಐತಿಹಾಸಿಕ ಪ್ರಜ್ಞೆಯನ್ನು ಮೂಡಿಸುವುದು.
2. ಗ್ರಾಮಗಳಲ್ಲಿ ಪತ್ತೆಯಾಗಿರುವ ಅವಶೇಷಗಳ ಸಂರಕ್ಷಣೆಯ ಜವಾಬ್ದಾರಿಯನ್ನು ಗ್ರಾಮ ಪಂಚಾಯತಿಗಳಿಗೆ ವಹಿಸುವುದು.

3. ಸಕ್ಷಮ ಪ್ರಾಧಿಕಾರದಿಂದ ಐತಿಹಾಸಿಕ ಜಾಗೃತಿ ಕಾರ್ಯಕ್ರಮಗಳನ್ನು ಗ್ರಾಮೀಣ ಮಟ್ಟದಲ್ಲಿ ಆಯೋಜಿಸುವುದು.
4. ತಾಲೂಕು ವ್ಯಾಪ್ತಿಯಲ್ಲಿ ದೊರೆತ ಅವಶೇಷಗಳ ಸಂರಕ್ಷಣೆಗಾಗಿ ತಾಲೂಕಿಗೊಂದು ಪುರಾತತ್ವ ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವುದು.
5. ಸಕ್ಷಮ ಪ್ರಾಧಿಕಾರದಿಂದ ತಾಲೂಕಿಗೊಂದು ಇತಿಹಾಸ ಮತ್ತು ಪುರಾತತ್ವ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದು.
6. ತೃಟಿತಗೊಂಡ ಶಿಲ್ಪಗಳ ಕುರಿತಾಗಿ ಜನರಲ್ಲಿರುವ ಮೂಢನಂಬಿಕೆಗಳನ್ನು ಹೋಗಲಾಡಿಸುವುದು.
7. ರಾಜ್ಯ ಪುರಾತತ್ವ ಇಲಾಖೆಯ ಅಡಿಯಲ್ಲಿ ಪ್ರತಿ ಗ್ರಾಮದ ಐತಿಹಾಸಿಕ ಅವಶೇಷಗಳನ್ನು ಪತ್ತೆ ಹಚ್ಚಿ ಅವುಗಳನ್ನು ರಕ್ಷಿಸುವ ಕಾರ್ಯವನ್ನು ಮಾಡುವುದು.
8. ಮುಧೋಳ ತಾಲೂಕಿನ ಪ್ರಮುಖ ಪುರಾತತ್ವ ನೆಲೆಗಳನ್ನು ರಾಜ್ಯ ಪುರಾತತ್ವ ಇಲಾಖೆಯ ಸಂರಕ್ಷಿತ ಪ್ರದೇಶವೆಂದು ಗುರುತಿಸುವುದು.
9. ಸರ್ಕಾರಿ ಮತ್ತು ಸರ್ಕಾರೇತರ ಸಂಘ/ಸಂಸ್ಥೆಗಳು ಪುರಾತತ್ವ ನೆಲೆಗಳನ್ನು ದತ್ತು ತೆಗೆದುಕೊಂಡು ಅವುಗಳ ಸಂರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸುವುದು.

## ಪರಾಮರ್ಶನ ಗ್ರಂಥಗಳು:


1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ.), (2006), ಬಾಗಲಕೋಟೆ ಜಿಲ್ಲೆಯ ಶಾಸನ ಸಂಪುಟ-9, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಬೆಳವಾಡಿ. ಎಸ್. ಎಸ್., (2017), ರನ್ನ ಮತ್ತು ಅವನ ಕೃತಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಯತಗಲ್ ಅಮರೇಶ (ಸಂ), (2020), ಶಾಸನ ಅಧ್ಯಯನ, ಸಂಪುಟ-11, ಸಂಚಿಕೆ-02, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಸಿಂದಗಿ ರಾಜಶೇಖರ್, (1988), ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಶನ್, ಧಾರವಾಡ.
5. ಮಲ್ಲಿಕಾರ್ಜುನ ಕೆ. (ಸಂ), (2012), ಡಾ. ಬಿ.ಆರ್. ಹಿರೇಮಠರ ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಚಿದಾನಂದಮೂರ್ತಿ ಎಂ., (2016), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.